ಕರ್ನಾಟಕ ವಿಧಾನ ಸಭೆ
ಹದಿನಾಲ್ಕನೇ ವಿಧಾನ ಸಭೆ
ಹತ್ತನೇ ಅಧಿವೇಶನ

# ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ವಿಧೇಯಕ, 2016

**(2016ರ ವಿಧಾನಸಭೆಯ ವಿಧೇಯಕ ಸಂಖ್ಯೆ-21)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ನಾಲ್ಕನೇ ತಿದ್ದುಪಡಿ) ಅಧಿನಿಯಮ, 2016 ಎಂದು ಕರೆಯತಕ್ಕದ್ದು.

(2) ಇದು 2016ರ ಜೂನ್ 22ರಿಂದ ಜಾರಿಗೆ ಬರಲಾಗಿದೆ ಎಂದು ಭಾವಿಸತಕ್ಕದ್ದು.

2. **ಅನುಸೂಚಿಯ ತಿದ್ದುಪಡಿ.-** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) ಅನುಸೂಚಿಯ 30ನೇ ಅನುಚ್ಛೇದದಲ್ಲಿ (2)ನೇ ಬಾಬಿನ ತರುವಾಯ, ಈ ಮುಂದಿನವನ್ನು ಸೇರಿತಕ್ಕದ್ದು, ಎಂದರೆ:-

"

| "ಲಿಖಿತ ಪತ್ರದ ವಿವರಣೆ | ಸೂಕ್ತ ಸ್ಟಾಂಪು ಸುಂಕ |
|---|---|
| "(3) ಮೇಲಿನ (1) ಮತ್ತು (2)ನೇ ಖಂಡಗಳಲ್ಲಿ ಏನೇ ಒಳಗೊಂಡಿದ್ದರೂ,-<br>(ಎ) ಗಣಿಗಾರಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದ (MDPA) ಹಾಗೂ ಅಥವಾ ಹರಾಜುಗಳ ಮೂಲಕ ಮಂಜೂರಾದ ಗಣಿಗಾರಿಕೆ ಗೇಣಿಯು:- | |
| (i) ಒಂದು ವರ್ಷಕ್ಕೆ ಮೇಲ್ಪಟ್ಟು ಆದರೆ ಹತ್ತು ವರ್ಷಗಳನ್ನು ಮೀರದ ಅವಧಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ | ಅನುಮೋದಿತ ಗಣಿಗಾರಿಕೆ ಯೋಜನೆಯನುಸಾರ ಅಂದಾಜು ಸರಾಸರಿ ವಾರ್ಷಿಕ ಉತ್ಪಾದನೆಯ ಮೇಲೆ ಲೆಕ್ಕಹಾಕಿದ ಹರಾಜಿನಲ್ಲಿ ಪಡೆದಿರುವ ಅಂತಿಮ ದರದ ಆಧಾರದ ಮೇರೆಗೆ ಸರಾಸರಿ ವಾರ್ಷಿಕ ರಾಯಧನ ಮತ್ತು ಸರಾಸರಿ ವಾರ್ಷಿಕ ಸಂದಾಯದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ. |

| | |
|---|---|
| (ii) ಹತ್ತು ವರ್ಷಗಳಿಗೆ ಮೇಲ್ಪಟ್ಟು ಆದರೆ ಇಪ್ಪತ್ತು ವರ್ಷಗಳಿಗೆ ಮೀರದ ಅವಧಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ | ಅನುಮೋದಿತ ಗಣಿಗಾರಿಕೆ ಯೋಜನೆಯನುಸಾರ ಅಂದಾಜು ಸರಾಸರಿ ವಾರ್ಷಿಕ ಉತ್ಪಾದನೆಯ ಮೇಲೆ ಲೆಕ್ಕಹಾಕಿದ ಹರಾಜಿನಲ್ಲಿ ಪಡೆದಿರುವ ಅಂತಿಮ ದರದ ಆಧಾರದ ಮೇರೆಗೆ ಸರಾಸರಿ ವಾರ್ಷಿಕ ರಾಯಧನ ಮತ್ತು ಸರಾಸರಿ ವಾರ್ಷಿಕ ಸಂದಾಯದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಎರಡು ರೂಪಾಯಿಗಳು. |
| (iii) ಇಪ್ಪತ್ತು ವರ್ಷಗಳಿಗೆ ಮೇಲ್ಪಟ್ಟು ಆದರೆ ಮೂವತ್ತು ವರ್ಷಗಳಿಗೆ ಮೀರದ ಅವಧಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ | ಅನುಮೋದಿತ ಗಣಿಗಾರಿಕೆ ಯೋಜನೆಯನುಸಾರ ಅಂದಾಜು ಸರಾಸರಿ ವಾರ್ಷಿಕ ಉತ್ಪಾದನೆಯ ಮೇಲೆ ಲೆಕ್ಕಹಾಕಿದ ಹರಾಜಿನಲ್ಲಿ ಪಡೆದಿರುವ ಅಂತಿಮ ದರದ ಆಧಾರದ ಮೇರೆಗೆ ಸರಾಸರಿ ವಾರ್ಷಿಕ ರಾಯಧನ ಮತ್ತು ಸರಾಸರಿ ವಾರ್ಷಿಕ ಸಂದಾಯದ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಮೂರು ರೂಪಾಯಿಗಳು. |
| (iv) ಮೂವತ್ತು ವರ್ಷಗಳಿಗೆ ಮೇಲ್ಪಟ್ಟು ಅಥವಾ ಖಾಯಂ ತಾತ್ಪರ್ಯವಾಗುವಲ್ಲಿ ಅಥವಾ ಯಾವುದೇ ನಿಶ್ಚಿತ ಅವಧಿಗೆ ತಾತ್ಪರ್ಯವಾಗದಿರುವಲ್ಲಿ | ಅನುಮೋದಿತ ಗಣಿಗಾರಿಕೆ ಯೋಜನೆಯನುಸಾರ ಅಂದಾಜು ಸರಾಸರಿ ವಾರ್ಷಿಕ ಉತ್ಪಾದನೆಯ ಮೇಲೆ ಲೆಕ್ಕಹಾಕಿದ ಹರಾಜಿನಲ್ಲಿ ಪಡೆದಿರುವ ಅಂತಿಮ ದರದ ಆಧಾರದ ಮೇರೆಗೆ ಸರಾಸರಿ ವಾರ್ಷಿಕ ರಾಯಧನದ ನಾಲ್ಕರಷ್ಟು ಮತ್ತು ಸರಾಸರಿ ವಾರ್ಷಿಕ ಸಂದಾಯದ ನಾಲ್ಕರಷ್ಟರ ಒಟ್ಟು ಮೊಬಗಿನ ಅಥವಾ ಮೌಲ್ಯದ ಮೇಲೆ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐದು ರೂಪಾಯಿಗಳು.<br>ಪರಂತು, ಒಂದು ಸ್ವತ್ತಿಗಾಗಿ ಅಗತ್ಯವಾದ ಮೌಲ್ಯಾನುಸಾರ ಸ್ಟಾಂಪು ಸಹಿತವಾಗಿ ಗಣಿಗಾರಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದಕ್ಕೆ ಗಣಿಗಾರಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದದೊಡನೆ ಗಣಿಗಾರಿಕೆ ಗೇಣಿಗೆ ಹಾಗೂ ಗಣಿಗಾರಿಕೆ ಗೇಣಿಗೆ ಯುಕ್ತವಾಗಿ ಸ್ಟಾಂಪು ಹಾಕಲಾದ ಮತ್ತು ಅಂಥ ಗಣಿಗಾರಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದಕ್ಕನುಸಾರವಾಗಿ ಗುತ್ತಿಗೆಯನ್ನು ಬರೆದುಕೊಡಲಾದ ಯಾವುದೇ ಸಂದರ್ಭದಲ್ಲಿ, ಅಂಥ ಗಣಿಗಾರಿಕೆ ಗೇಣಿಯ ಮೇಲಿನ ಸುಂಕವು ಐವತ್ತು ರೂಪಾಯಿಗಳನ್ನು ಮೀರತಕ್ಕದ್ದಲ್ಲ. |
| (ಬಿ) ಗಣಿಗಾರಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದ (MDPA) ಹಾಗೂ ಅಥವಾ ಹರಾಜುಗಳ ಹೊರತಾಗಿ ಮಂಜೂರಾದ ಗಣಿಗಾರಿಕೆ | |

| | |
|---|---|
| (i) ಒಂದು ವರ್ಷಕ್ಕೆ ಮೇಲ್ಪಟ್ಟು ಆದರೆ ಹತ್ತು ವರ್ಷಗಳನ್ನು ಮೀರದ ಅವಧಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ | ಅನುಮೋದಿತ ಗಣಿಗಾರಿಕೆ ಯೋಜನೆಯನುಸಾರ ಪ್ರೀಮಿಯಂ, ಮುಂಗಡ ಹಣ, ಭದ್ರತಾ ಠೇವಣಿ ಮತ್ತು ರುಸುಮಿನ ಅಂದಾಜು ಸರಾಸರಿ ವಾರ್ಷಿಕ ಉತ್ಪಾದನೆಯ ಮೇಲೆ ಸರಾಸರಿ ವಾರ್ಷಿಕ ರಾಯಧನ ಮತ್ತು ಲೆಕ್ಕಹಾಕಿದ ಖನಿಜ ಮೌಲ್ಯದ ಷೇರಿನ ಸರಾಸರಿ ವಾರ್ಷಿಕ ಸಂದಾಯದ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಒಂದು ರೂಪಾಯಿ. |
| (ii) ಹತ್ತು ವರ್ಷಗಳಿಗೆ ಮೇಲ್ಪಟ್ಟು ಆದರೆ ಇಪ್ಪತ್ತು ವರ್ಷಗಳಿಗೆ ಮೀರದ ಅವಧಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ | ಅನುಮೋದಿತ ಗಣಿಗಾರಿಕೆ ಯೋಜನೆಯನುಸಾರ ಪ್ರೀಮಿಯಂ, ಮುಂಗಡ ಹಣ, ಭದ್ರತಾ ಠೇವಣಿ ಮತ್ತು ರುಸುಮಿನ ಅಂದಾಜು ಸರಾಸರಿ ವಾರ್ಷಿಕ ಉತ್ಪಾದನೆಯ ಮೇಲೆ ಸರಾಸರಿ ವಾರ್ಷಿಕ ರಾಯಧನ ಮತ್ತು ಲೆಕ್ಕಹಾಕಿದ ಖನಿಜ ಮೌಲ್ಯದ ಷೇರಿನ ಸರಾಸರಿ ವಾರ್ಷಿಕ ಸಂದಾಯದ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಎರಡು ರೂಪಾಯಿಗಳು. |
| (iii) ಇಪ್ಪತ್ತು ವರ್ಷಗಳಿಗೆ ಮೇಲ್ಪಟ್ಟು ಆದರೆ ಮೂವತ್ತು ವರ್ಷಗಳಿಗೆ ಮೀರದ ಅವಧಿಗೆ ಇದೆಯೆಂದು ತಾತ್ಪರ್ಯವಾಗುವಲ್ಲಿ | ಅನುಮೋದಿತ ಗಣಿಗಾರಿಕೆ ಯೋಜನೆಯನುಸಾರ ಪ್ರೀಮಿಯಂ, ಮುಂಗಡ ಹಣ, ಭದ್ರತಾ ಠೇವಣಿ ಮತ್ತು ರುಸುಮಿನ ಅಂದಾಜು ಸರಾಸರಿ ವಾರ್ಷಿಕ ಉತ್ಪಾದನೆಯ ಮೇಲೆ ಸರಾಸರಿ ವಾರ್ಷಿಕ ರಾಯಧನ ಮತ್ತು ಲೆಕ್ಕಹಾಕಿದ ಖನಿಜ ಮೌಲ್ಯದ ಷೇರಿನ ಸರಾಸರಿ ವಾರ್ಷಿಕ ಸಂದಾಯದ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಮೂರು ರೂಪಾಯಿಗಳು. |
| (iv) ಮೂವತ್ತು ವರ್ಷಗಳಿಗೆ ಮೇಲ್ಪಟ್ಟು ಅಥವಾ ಖಾಯಂ ತಾತ್ಪರ್ಯವಾಗುವಲ್ಲಿ ಅಥವಾ ಯಾವುದೇ ನಿಶ್ಚಿತ ಅವಧಿಗೆ ತಾತ್ಪರ್ಯವಾಗದಿರುವಲ್ಲಿ | ಅನುಮೋದಿತ ಗಣಿಗಾರಿಕೆ ಯೋಜನೆಯನುಸಾರ ಪ್ರೀಮಿಯಂ, ಮುಂಗಡ ಹಣ, ಭದ್ರತಾ ಠೇವಣಿ ಮತ್ತು ರುಸುಮಿನ ಅಂದಾಜು ಸರಾಸರಿ ವಾರ್ಷಿಕ ಉತ್ಪಾದನೆಯ ಮೇಲೆ ಸರಾಸರಿ ವಾರ್ಷಿಕ ರಾಯಧನ ಮತ್ತು ಲೆಕ್ಕಹಾಕಿದ ಖನಿಜ ಮೌಲ್ಯದ ಷೇರಿನ ಸರಾಸರಿ ವಾರ್ಷಿಕ ಸಂದಾಯದ ಅಥವಾ ಅಂದಾಜು ಸಂಪನ್ಮೂಲಗಳ ಮೌಲ್ಯದ ಮೇಲೆ ಯಾವುದು ಹೆಚ್ಚೋ ಅದರ ಪ್ರತಿ ಒಂದು ನೂರು ರೂಪಾಯಿಗಳಿಗೆ ಅಥವಾ ಅದರ ಭಾಗಕ್ಕೆ ಐದು ರೂಪಾಯಿಗಳು;<br>ಪರಂತು, ಒಂದು ಸ್ವತ್ತಿಗಾಗಿ ಅಗತ್ಯವಾದ ಮೌಲ್ಯಾನುಸಾರ ಸ್ಟಾಂಪು ಸಹಿತವಾಗಿ ಗಣಿಗಾರಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದಕ್ಕೆ ಗಣಿಗಾರಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದದೊಡನೆ ಗಣಿಗಾರಿಕೆ ಗೇಣಿಗೆ ಹಾಗೂ ಗಣಿಗಾರಿಕೆ ಗೇಣಿಗೆ ಯುಕ್ತವಾಗಿ ಸ್ಟಾಂಪು ಹಾಕಲಾದ ಮತ್ತು ಅಂಥ ಗಣಿಗಾರಿಕೆ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದಕ್ಕನುಸಾರವಾಗಿ ಗುತ್ತಿಗೆಯನ್ನು ಬರೆದುಕೊಡಲಾದ ಯಾವುದೇ ಸಂದರ್ಭದಲ್ಲಿ, ಅಂಥ ಗಣಿಗಾರಿಕೆ ಗೇಣಿಯ ಮೇಲಿನ ಸುಂಕವು ಐವತ್ತು ರೂಪಾಯಿಗಳನ್ನು ಮೀರತಕ್ಕದ್ದಲ್ಲ. |

| | |
|---|---|
| | **ವಿವರಣೆ:** (1) ಈ ಅನುಚ್ಛೇದದಲ್ಲಿ "ಮುಂಗಡವಾಗಿ ನೀಡಿದ ಹಣ ಮತ್ತು ಭದ್ರತಾ ಠೇವಣಿ" ಪದಾವಳಿಯು ಯಾವುದೇ ಇತರ ಪಾವತಿಗಳೆಡೆಗೆ ಮರುಪಾವತಿಯಾಗಲಿ ಅಥವಾ ಹೊಂದಾಣಿಕೆಯಾಗಲೀ ನಿರ್ವಹಣಾ ಖಾತರಿ ಒಳಗೊಂಡ ಮುಂಗಡವಾಗಿ ನೀಡಿದ ಹಣ ಮತ್ತು ಭದ್ರತಾ ಠೇವಣಿಯೆಂಬ ಅರ್ಥ ಮತ್ತು ಇದನ್ನು ಒಳಗೊಳ್ಳುತ್ತದೆ.<br>(2) "ಅಂದಾಜು ಸಂಪನ್ಮೂಲಗಳ ಮೌಲ್ಯ" ವು ಖನಿಜಗಳ (ಅಟಾಮಿಕ್ ಅಂಡ್ ಹೈಡ್ರೋ ಕಾರ್ಬನ್ಸ್ ಎನರ್ಜಿ ಮಿನರಲ್ಸ್ ಹೊರತುಪಡಿಸಿ) ರಿಯಾಯಿತಿ ನಿಯಮಗಳು, 2016 ರಲ್ಲಿನ ಅದೇ ಅರ್ಥವನ್ನು ಹೊಂದಿರತಕ್ಕದ್ದು. |

"

**3. ನಿರಸನ ಮತ್ತು ಉಳಿಸುವಿಕೆಗಳು.**– (1) ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2016ನ್ನು (2016ರ ಕರ್ನಾಟಕ ಅಧ್ಯಾದೇಶ 02) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಳಿಸಿದ್ದಾಗ್ಯೂ, ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾದ ಯಾವುದೇ ಕಾರ್ಯ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮವನ್ನು ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 (1957ರ ಕೇಂದ್ರ ಅಧಿನಿಯಮ ಸಂಖ್ಯೆ 67) "ಗಣಿಗಾರಿಕೆ ಗೇಣಿ" ಪದವನ್ನು ಗಣಿಗಾರಿಕೆ ಕಾರ್ಯಾಚರಣೆಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಮಂಜೂರು ಮಾಡಿದ ಗೇಣಿ ಎಂದು ಪರಿಭಾಷಿಸುತ್ತದೆ ಮತ್ತು ಮುಂದುವರೆದು "ಗಣಿಗಾರಿಕೆ ಕಾರ್ಯಾಚರಣೆಗಳು" ಪದವನ್ನು ಯಾವುದೇ ಖನಿಜವನ್ನು ಹೊರತೆಗೆಯುವ ಉದ್ದೇಶಕ್ಕಾಗಿ ಕೈಗೊಂಡ ಯಾವುದೇ ಕಾರ್ಯಾಚರಣೆಗಳು ಎಂದು ಪರಿಭಾಷಿಸುತ್ತದೆ. ಗಣಿಗಾರಿಕೆ ಗೇಣಿಯು, ಗಣಿಗಾರಿಕೆ ಕಾರ್ಯಾಚರಣೆಗಳು ಮತ್ತು ಗಣಿಗಾರಿಕೆ ಹಕ್ಕುಗಳ ನಿಯಂತ್ರಣಕ್ಕಾಗಿ ವಿನ್ಯಾಸಗೊಳಿಸಿದ ಒಂದು ಅಗತ್ಯ ಲಿಖಿತಪತ್ರವಾಗಿದೆ. ಅದು ಸ್ಥಿರಾಸ್ತಿ ಗೇಣಿಯ ಎಲ್ಲಾ ವೈಶಿಷ್ಟ್ಯಗಳಿಗೆ ಸಂಪೂರ್ಣವಾಗಿ ಅನುರೂಪವಾಗಿರುವುದಿಲ್ಲ. ಖಾಸಗಿ ಒಡೆತನದ ಮತ್ತು ಗಣಿಗಾರಿಕೆ ಗೇಣಿ ಪ್ರದೇಶದ ಭಾಗವಾಗಿರುವ ಸಾಧ್ಯತೆಯನ್ನು ಸಹ ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ ಹಾಗೂ ಕರ್ನಾಟಕ ಸಣ್ಣ ಖನಿಜಗಳ ರಿಯಾಯಿತಿ ನಿಯಮಗಳು, 1994ರ ಅಡಿಯಲ್ಲಿ ಬಹಳ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆದುದರಿಂದ, ಗಣಿಗಾರಿಕೆ ಗೇಣಿಗಳನ್ನು ಸ್ಥಿರಾಸ್ತಿಗಳ ಗೇಣಿಯಿಂದ ಬೇರೆಯಾಗಿ ಪರಿಗಣಿಸಿ, ಸ್ಟಾಂಪು ಸುಂಕದ ಉದ್ದೇಶಕ್ಕಾಗಿ ಇರುವ ದಸ್ತಾವೇಜುಗಳ ಪ್ರತ್ಯೇಕ ವರ್ಗವಾಗಿ ಗಣಿಗಾರಿಕೆ ಗೇಣಿಗಳನ್ನು ವರ್ಗೀಕರಿಸುವ ಅಗತ್ಯವಿದೆ. ಹರಾಜಿನ ಮೂಲಕ ಮಂಜೂರು ಮಾಡಿದ ಅಥವಾ ಹರಾಜಿನ ಹೊರತಾಗಿ ಬೇರೆ ರೀತಿಯಾಗಿ ಮಂಜೂರು ಮಾಡಿದ ಗೇಣಿಗಾಗಿ ಪ್ರತ್ಯೇಕ ಉಪಬಂಧಗಳನ್ನು ಸಹ ಕಲ್ಪಿಸಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಿನಾಂಕ:30.07.2015ರ ತನ್ನ ಆದೇಶದಲ್ಲಿ, ಹೆಚ್ಚುವರಿ ಷರತ್ತುಗಳ ಸಹಿತ, ಗಣಿಗಳು ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ ಮತ್ತು ಖನಿಜ (ಹರಾಜು) ನಿಯಮಗಳು, 2015ರ ತಿದ್ದುಪಡಿಗಳಿಗನುಸಾರವಾಗಿ ಆದೇಶದ ದಿನಾಂಕದಿಂದ 32 ವಾರಗಳ, ಆದರೆ ಸಾಧ್ಯವಾದಷ್ಟು 26 ವಾರಗಳ ಬಾಹ್ಯ ಪರಿಮಿತಿಯೊಳಗಾಗಿ 15 'ಸಿ' ಪ್ರವರ್ಗ ಗಣಿಗಳ ಹರಾಜನ್ನು ನಡೆಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿಗದಿಪಡಿಸಿದ ಕಾಲಮಿತಿಯು ಈಗಾಗಲೇ ಮಾರ್ಚ್ 2016ರಲ್ಲಿ ಕೊನೆಗೊಂಡಿದೆ ಮತ್ತು ಈ ಸಂಬಂಧವಾಗಿ ಗಣಿಗಳ ಹರಾಜಿಗಾಗಿ ಸಮಯವನ್ನು ವಿಸ್ತರಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ವಾದಕಾಲೀನ ಅರ್ಜಿಯನ್ನು ದಾಖಲಿಸಲಾಗಿದೆ. ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ದಾಖಲಿಸಿದ ವಾದಕಾಲೀನ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ

ಸರ್ವೋಚ್ಚ ನ್ಯಾಯಾಲಯವು ಇದುವರೆಗೆ ಯಾವುದೇ ತೀರ್ಮಾನವನ್ನು ಕೈಗೊಂಡಿರುವುದಿಲ್ಲ. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಆಯುಕ್ತರು ಈಗಾಗಲೇ ನಾಲ್ಕು ಬಾರಿ ವಾರ್ಷಿಕ ಕಾರ್ಯಕ್ರಮ ಪಟ್ಟಿಯನ್ನು (Calender of events) ವಿಸ್ತರಿಸಿದ್ದಾರೆ. ಗಣಿಗಾರಿಕೆ ಗೇಣಿ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದ (ಎಂಡಿಪಿಎ) ಹಾಗೂ ಗಣಿಗಾರಿಕೆ ಗೇಣಿ ಪತ್ರದ ಮೇಲೆ ಸ್ಟಾಂಪು ಸುಂಕ ಮತ್ತು ನೋಂದಣಿ ಶುಲ್ಕಕ್ಕೆ ಸಂಬಂಧಪಟ್ಟಂತೆ ಬಿಡ್ಡರ್‌ಗಳಿಗೆ ಸ್ಪಷ್ಟೀಕರಣ ನೀಡುವ ಸಲುವಾಗಿ ಗಣಿ ಮತ್ತು ಭೂವಿಜ್ಞಾನಗಳ ಇಲಾಖೆಯ ಆಯುಕ್ತರಿಗೆ ಈ ಶಾಸನವನ್ನು ರಚಿಸುವುದು ಅತ್ಯಂತ ಅಗತ್ಯವಾಗಿದೆ. ಬಿಡ್ಡರ್‌ಗಳಿಗೆ ಸ್ಪಷ್ಟೀಕರಣ ನೀಡುವುದಕ್ಕಾಗಿ ನಿಗದಿಪಡಿಸಿದ ಅಂತಿಮ ದಿನಾಂಕವು 22.06.2016 ಆಗಿದೆ. ಪ್ರಸ್ತಾವಿತ ಶಾಸನವನ್ನು ಈ ದಿನಾಂಕಕ್ಕೆ ಮೊದಲು ಅಂಗೀಕರಿಸಬೇಕಾದ ಅಗತ್ಯವಿದೆ. ವಿಷಯವನ್ನು ಮತ್ತಷ್ಟು ವಿಳಂಬಗೊಳಿಸಿದರೆ ಆಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅದನ್ನು ಗಂಭೀರವಾಗಿ ಪರಿಗಣಿಸುವುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಂಟಾದ ವಿಳಂಬದ ಕುರಿತು ವಿವರಣೆ ನೀಡುವಲ್ಲಿ ರಾಜ್ಯ ಸರ್ಕಾರಕ್ಕೆ ಸಂದಿಗ್ಧ ಪರಿಸ್ಥಿತಿಯು ಉಂಟಾಗುವುದು.

ಗಣಿ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದ ಎಂದು ಕರೆಯಲಾಗುವ ಹೊಸ ಲಿಖಿತಪತ್ರವನ್ನು ಖನಿಜಗಳ (ಹರಾಜು) ನಿಯಮಗಳು, 2015 ಮತ್ತು ಖನಿಜಗಳ (ಅಟಾಮಿಕ್ ಅಂಡ್ ಹೈಡ್ರೋಕಾರ್ಬನ್ಸ್ ಎನರ್ಜಿ ಮಿನರಲ್ಸ್ ಹೊರತುಪಡಿಸಿ) ರಿಯಾಯಿತಿ ನಿಯಮಗಳು, 2016ರ ಮೂಲಕ ಮಂಡಿಸಲಾಗಿದೆ ಮತ್ತು ಅವುಗಳನ್ನು ಸಹ ಸ್ಟಾಂಪು ಸುಂಕದ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಬೇಕಾದ ಅಗತ್ಯವಿದೆ.

ವಿಷಯವು ಅತ್ಯಂತ ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ಕರ್ನಾಟಕ ವಿಧಾನಸಭೆಯು ಅಧಿವೇಶನದಲ್ಲಿ ಇಲ್ಲದೇ ಇದ್ದುದರಿಂದ, ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2016ನ್ನು (2016ರ ಕರ್ನಾಟಕ ಅಧ್ಯಾದೇಶ ಸಂಖ್ಯೆ.02) ದಿನಾಂಕ. 22.06.2016ರಂದು ಪ್ರಖ್ಯಾಪಿಸಲಾಗಿತ್ತು.

ಸದರಿ ಅಧ್ಯಾದೇಶಕ್ಕೆ ಬದಲಾಗಿ ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಗಳ 80ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ**

ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957 (1957ರ ಕೇಂದ್ರ ಅಧಿನಿಯಮ ಸಂಖ್ಯೆ 67) "ಗಣಿಗಾರಿಕೆ ಗೇಣಿ" ಪದವನ್ನು ಗಣಿಗಾರಿಕೆ ಕಾರ್ಯಾಚರಣೆಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ಮಂಜೂರು ಮಾಡಿದ ಗೇಣಿ ಎಂದು ಪರಿಭಾಷಿಸುತ್ತದೆ ಮತ್ತು ಮುಂದುವರೆದು "ಗಣಿಗಾರಿಕೆ ಕಾರ್ಯಾಚರಣೆಗಳು" ಪದವನ್ನು ಯಾವುದೇ ಖನಿಜವನ್ನು ಹೊರತೆಗೆಯುವ ಉದ್ದೇಶಕ್ಕಾಗಿ ಕೈಗೊಂಡ ಯಾವುದೇ ಕಾರ್ಯಾಚರಣೆಗಳು ಎಂದು ಪರಿಭಾಷಿಸುತ್ತದೆ. ಗಣಿಗಾರಿಕೆ ಗೇಣಿಯು, ಗಣಿಗಾರಿಕೆ ಕಾರ್ಯಾಚರಣೆಗಳು ಮತ್ತು ಗಣಿಗಾರಿಕೆ ಹಕ್ಕುಗಳ ನಿಯಂತ್ರಣಕ್ಕಾಗಿ ವಿನ್ಯಾಸಗೊಳಿಸಿದ ಒಂದು ಅಗತ್ಯ ಲಿಖಿತಪತ್ರವಾಗಿದೆ. ಅದು ಸ್ಥಿರಾಸ್ತಿ ಗೇಣಿಯ ಎಲ್ಲಾ ವೈಶಿಷ್ಟ್ಯಗಳಿಗೆ ಸಂಪೂರ್ಣವಾಗಿ ಅನುರೂಪವಾಗಿರುವುದಿಲ್ಲ. ಖಾಸಗಿ ಒಡೆತನದ ಮತ್ತು ಗಣಿಗಾರಿಕೆ ಗೇಣಿ ಪ್ರದೇಶದ ಭಾಗವಾಗಿರುವ ಸಾಧ್ಯತೆಯನ್ನು ಸಹ ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ ಹಾಗೂ ಕರ್ನಾಟಕ ಸಣ್ಣ ಖನಿಜಗಳ ರಿಯಾಯಿತಿ ನಿಯಮಗಳು, 1994ರ ಅಡಿಯಲ್ಲಿ ಬಹಳ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಆದುದರಿಂದ, ಗಣಿಗಾರಿಕೆ ಗೇಣಿಗಳನ್ನು ಸ್ಥಿರಾಸ್ತಿಗಳ ಗೇಣಿಯಿಂದ ಬೇರೆಯಾಗಿ ಪರಿಗಣಿಸಿ, ಸ್ಟಾಂಪು ಸುಂಕದ ಉದ್ದೇಶಕ್ಕಾಗಿ ಇರುವ ದಸ್ತಾವೇಜುಗಳ ಪ್ರತ್ಯೇಕ ವರ್ಗವಾಗಿ ಗಣಿಗಾರಿಕೆ ಗೇಣಿಗಳನ್ನು ವರ್ಗೀಕರಿಸುವ ಅಗತ್ಯವಿದೆ. ಹರಾಜಿನ ಮೂಲಕ ಮಂಜೂರು ಮಾಡಿದ ಅಥವಾ ಹರಾಜಿನ ಹೊರತಾಗಿ ಬೇರೆ ರೀತಿಯಾಗಿ ಮಂಜೂರು ಮಾಡಿದ ಗೇಣಿಗಾಗಿ ಪ್ರತ್ಯೇಕ ಉಪಬಂಧಗಳನ್ನು ಸಹ ಕಲ್ಪಿಸಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಿನಾಂಕ:30.07.2015ರ ತನ್ನ ಆದೇಶದಲ್ಲಿ, ಹೆಚ್ಚುವರಿ ಷರತ್ತುಗಳ ಸಹಿತ, ಗಣಿಗಳು ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ ಮತ್ತು ಖನಿಜ (ಹರಾಜು) ನಿಯಮಗಳು, 2015ರ ತಿದ್ದುಪಡಿಗಳಿಗನುಸಾರವಾಗಿ ಆದೇಶದ ದಿನಾಂಕದಿಂದ 32 ವಾರಗಳ, ಆದರೆ ಸಾಧ್ಯವಾದಷ್ಟು 26 ವಾರಗಳ ಬಾಹ್ಯ ಪರಿಮಿತಿಯೊಳಗಾಗಿ 15 'ಸಿ' ಪ್ರವರ್ಗ ಗಣಿಗಳ ಹರಾಜನ್ನು ನಡೆಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿಗದಿಪಡಿಸಿದ ಕಾಲಮಿತಿಯು ಈಗಾಗಲೇ ಮಾರ್ಚ್ 2016ರಲ್ಲಿ ಕೊನೆಗೊಂಡಿದೆ ಮತ್ತು ಈ ಸಂಬಂಧವಾಗಿ ಗಣಿಗಳ ಹರಾಜಿಗಾಗಿ ಸಮಯವನ್ನು ವಿಸ್ತರಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ವಾದಕಾಲೀನ ಅರ್ಜಿಯನ್ನು ದಾಖಲಿಸಲಾಗಿದೆ. ವಾಣಿಜ್ಯ ಮತ್ತು ಕೈಗಾರಿಕೆಗಳ ಇಲಾಖೆಯು ದಾಖಲಿಸಿದ ವಾದಕಾಲೀನ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇದುವರೆಗೆ ಯಾವುದೇ ತೀರ್ಮಾನವನ್ನು ಕೈಗೊಂಡಿರುವುದಿಲ್ಲ. ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಆಯುಕ್ತರು ಈಗಾಗಲೇ ನಾಲ್ಕು ಬಾರಿ ವಾರ್ಷಿಕ ಕಾರ್ಯಕ್ರಮ ಪಟ್ಟಿಯನ್ನು (Calender of events) ವಿಸ್ತರಿಸಿದ್ದಾರೆ. ಗಣಿಗಾರಿಕೆ ಗೇಣಿ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದ (ಎಂಡಿಪಿಎ) ಹಾಗೂ ಗಣಿಗಾರಿಕೆ ಗೇಣಿ ಪತ್ರದ ಮೇಲೆ ಸ್ಟಾಂಪು ಸುಂಕ ಮತ್ತು ನೋಂದಣಿ ಶುಲ್ಕಕ್ಕೆ ಸಂಬಂಧಪಟ್ಟಂತೆ ಬಿಡ್ಡರ್‌ಗಳಿಗೆ ಸ್ಪಷ್ಟೀಕರಣ ನೀಡುವ ಸಲುವಾಗಿ ಗಣಿ ಮತ್ತು ಭೂವಿಜ್ಞಾನಗಳ ಇಲಾಖೆಯ ಆಯುಕ್ತರಿಗೆ ಈ ಶಾಸನವನ್ನು ರಚಿಸುವುದು ಅತ್ಯಂತ ಅಗತ್ಯವಾಗಿದೆ. ಬಿಡ್ಡರ್‌ಗಳಿಗೆ ಸ್ಪಷ್ಟೀಕರಣ ನೀಡುವುದಕ್ಕಾಗಿ ನಿಗದಿಪಡಿಸಿದ ಅಂತಿಮ ದಿನಾಂಕವು 22.06.2016 ಆಗಿದೆ. ಪ್ರಸ್ತಾವಿತ ಶಾಸನವನ್ನು ಈ ದಿನಾಂಕಕ್ಕೆ ಮೊದಲು ಅಂಗೀಕರಿಸಬೇಕಾದ ಅಗತ್ಯವಿದೆ. ವಿಷಯವನ್ನು ಮತ್ತಷ್ಟು ವಿಳಂಬಗೊಳಿಸಿದರೆ ಆಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಅದನ್ನು ಗಂಭೀರವಾಗಿ ಪರಿಗಣಿಸುವುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಂಟಾದ ವಿಳಂಬದ ಕುರಿತು ವಿವರಣೆ ನೀಡುವಲ್ಲಿ ರಾಜ್ಯ ಸರ್ಕಾರಕ್ಕೆ ಸಂಧಿಗ್ದ ಪರಿಸ್ಥಿತಿಯು ಉಂಟಾಗುವುದು.

ಗಣಿ ಅಭಿವೃದ್ಧಿ ಮತ್ತು ಉತ್ಪಾದನಾ ಒಪ್ಪಂದ ಎಂದು ಕರೆಯಲಾಗುವ ಹೊಸ ಲಿಖಿತಪತ್ರವನ್ನು ಖನಿಜಗಳ (ಹರಾಜು) ನಿಯಮಗಳು, 2015 ಮತ್ತು ಖನಿಜಗಳ (ಅಟಾಮಿಕ್ ಅಂಡ್ ಹೈಡ್ರೋಕಾರ್ಬನ್ಸ್ ಎನರ್ಜಿ ಮಿನರಲ್ಸ್ ಹೊರತುಪಡಿಸಿ) ರಿಯಾಯಿತಿ ನಿಯಮಗಳು, 2016ರ ಮೂಲಕ ಮಂಡಿಸಲಾಗಿದೆ ಮತ್ತು ಅವುಗಳನ್ನು ಸಹ ಸ್ಟಾಂಪು ಸುಂಕದ ಉದ್ದೇಶಕ್ಕಾಗಿ ನಿರ್ದಿಷ್ಟಪಡಿಸಬೇಕಾದ ಅಗತ್ಯವಿದೆ.

ವಿಷಯವು ಅತ್ಯಂತ ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ಕರ್ನಾಟಕ ವಿಧಾನಸಭೆಯು ಅಧಿವೇಶನದಲ್ಲಿ ಇಲ್ಲದೇ ಇದ್ದುದರಿಂದ, ಕರ್ನಾಟಕ ಸ್ಟಾಂಪು (ತಿದ್ದುಪಡಿ) ಅಧ್ಯಾದೇಶ, 2016ನ್ನು (2016ರ ಕರ್ನಾಟಕ ಅಧ್ಯಾದೇಶ ಸಂಖ್ಯೆ.02) ದಿನಾಂಕ. 22.06.2016ರಂದು ಪ್ರಖ್ಯಾಪಿಸಲಾಗಿತ್ತು.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕಾಗೋಡು ತಿಮ್ಮಪ್ಪ**
ಕಂದಾಯ ಸಚಿವರು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಪಿ7, ಕಾಸೂ 329, 1000–ಪ್ರತಿಗಳು 8ನೇ ಜುಲೈ, 2016

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**TENTH SESSION**

# THE KARNATAKA STAMP (FOURTH AMENDMENT) Bill, 2016
## (L.A. Bill No. 21 of 2016)

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957) for the purposes hereinafter appearing;

Be it enacted by the Karnataka State Legislature in the Sixty-seventh Year of Republic of India as follows:-

**1. Short title and commencement.-** (1) This Act may be called the Karnataka Stamp ( Fourth Amendment) Act, 2016.

(2) It shall be deemed to have come into force with effect from the 22nd day of June, 2016.

**2. Amendment of schedule.-** In the Karnataka Stamp Act, 1957, (Karnataka Act 34 of 1957) in the schedule, in the article 30, after item (2), the following article shall be inserted, namely:-

| Description of Instrument | Proper Stamp Duty |
|---|---|
| "(3) Notwithstanding anything contained in clause (1) and (2) above, in respect of,- **(a)** Mine Development and Production Agreement (MDPA) and or Mining Lease granted through auctions:- | |
| (i) where the lease purports to be for a term exceeding one year and not exceeding ten years. | One rupee for every one hundred rupees or part thereof on the total amount or value of; the average annual royalty and average annual payment based on the final price offer obtained |

| | |
|---|---|
| | in the auction calculated on the estimated average annual production as per the approved mining plan. |
| (ii) where the lease purports to be for a term exceeding ten years and not exceeding twenty years | Two rupees for every one hundred rupees or part thereof on the total amount or value of; the average annual royalty and average annual payment based on the final price offer obtained in the auction calculated on the estimated average annual production as per the approved mining plan. |
| (iii) where the lease purports to be for a term exceeding twenty years and not exceeding thirty years | Three rupees for every one hundred rupees or part thereof on the total amount or value of; the average annual royalty and average annual payment based on the final price offer obtained in the auction calculated on the estimated average annual production as per the approved mining plan. |
| (iv) where the lease purports to be for a term exceeding thirty years or in perpetuity or does not purport to be for any definite term. | Five rupees for every one hundred rupees or part thereof on the total amount or value of; four times the average annual royalty and four times the average annual payment based on the final price offer obtained in the auction calculated on the estimated average annual production as per the approved mining plan<br><br>Provided that in any case when Mine Development And Production Agreement (MDPA) is duly stamped with the ad valorem stamp required for MDPA as well as for a mining lease and a mining lease in pursuance of such Mine Development And Production Agreement is subsequently executed, the duty on such mining lease shall not exceed rupees fifty: |

| | |
|---|---|
| **(b):** Mine Development and Production Agreement (MDPA) and or Mining Lease granted other than by auctions. | |
| (i) where the lease purports to be for a term exceeding one year and not exceeding ten years. | One rupee for every one hundred rupees or part thereof on the total amount or value of; the average annual royalty and average annual payment as share of value of mineral calculated on the estimated average annual production as per the approved mining plan, premium, money advanced, security deposit and fine. |
| (ii) where the lease purports to be for a term exceeding ten years and not exceeding twenty years | Two rupees for every one hundred rupees or part thereof on the total amount or value of; the average annual royalty and average annual payment as share of value of mineral calculated on the estimated average annual production as per the approved mining plan, premium, money advanced, security deposit and fine. |
| (iii) where the lease purports to be for a term exceeding twenty years and not exceeding thirty years | Three rupees for every one hundred rupees or part thereof on the total amount or value of; the average annual royalty and average annual payment as share of value of mineral calculated on the estimated average annual production as per the approved mining plan, premium, money advanced, security deposit and fine. |
| (iv) where the lease purports to be for a term exceeding thirty years or in perpetuity or does not purport to be for any definite term. | Five rupees for every one hundred rupees or part thereof on the total amount or value of; four times the average annual royalty and four times the average annual payment as share of value of mineral calculated on the estimated average annual production as per the approved mining plan, premium, money advanced, security |

| | |
|---|---|
| | deposit and fine; or on the value of Estimated Resources whichever is higher;<br><br>Provided that in any case when Mine Development And Production Agreement (MDPA) is duly stamped with the ad valorem stamp required for MDPA as well as for mining lease and a mining lease in pursuance of such Mine Development And Production Agreement is subsequently executed, the duty on such mining lease shall not exceed rupees fifty:<br><br>**Explanation:** (1) The term "money advanced and security deposit" in this Article means and includes the money advanced and security deposit including performance guarantee whether refundable or adjustable towards any other payments.<br><br>(2) "Value of Estimated Resources" shall have the same meaning as that in the Minerals (Other than Atomic and Hydro Carbons Energy Minerals) Concession Rules, 2016. |

"

**3. Repeal and savings.-** (1) The Karnataka Stamp (Amendment) ordinance, 2016 (Karnataka ordinance 2 of 2016) is hereby repealed.

(2) Notwithstanding such repeal anything done or any action taken under the Principal Act as amended by the said Ordinance shall be deemed to have been done or taken under the principal Act as amended by this Act.

## STATEMENT OF OBJECTS AND REASONS

Mines and Mineral (Development and Regulation) Act, 1957 (Central Act 67 of 1957) Act defines a "mining lease" as a lease granted for the purpose of undertaking mining operations, and further defines "mining operations" as any operations undertaken for the purpose of winning any mineral. Mining lease is essentially an instrument designed for regulation of mining operations and mining rights. It does not fully conform to all the characteristics of a lease of immovable property. The Possibility of privately owned and being part of the mining lease area is also very clearly contemplated under the Mines and Mineral (Development and Regulation) Act, 1957 as well as the Karnataka Minor Minerals Concession Rules, 1994. Therefore, there is a need to classify mining leases as a separate class of documents for the purpose of stamp duty, distinct from lease of immovable property. Separate provisions are also provided for lease granted by auction and granted by way other than auction.

Hon'ble Supreme Court in its order dated: 30.07.2015 has directed the State Government to conduct the auction of 15 'C' Category mines within outer limit of 32 weeks, preferably 26 weeks from the date of order in accordance with the amendments of Mines and Minerals (Development and Regulation) Act, 1957 and the Mineral (Auction) Rules, 2015 along with additional conditions.

The time line fixed by the Hon'ble Supreme Court has already expired in March, 2016 and in this connection an Interlocutory Application has been filed before the Hon'ble Supreme Court for extending time for auction of mines. The Hon'ble Supreme Court has not yet decided on Interlocutory Application filed by the Commerce and Industries Department. The Commissioner, Department of Mines and Geology has already extended the calendar of events four times. Making this legislation is very essential for the Commissioner, Department of Mines and Geology to give clarification to the bidders with respect to stamp duty and registration fee on the Mining Lease Development and Production Agreement (MDPA) and mining Lease Deed. The last date for giving clarification to the bidders is 22.06.2016.

proposed legislation needs to be passed before this date. If the matter is further delayed then the Hon'ble Supreme Court may take it seriously and it will create a very difficult position for the State Government to explain the delay in the matter.

A new instrument called the Mine Development and Production Agreement has been introduced by the Minerals (Auction) Rules, 2015 and the Minerals (Other than Atomic and Hydrocarbons Energy) Minerals Rule 2016, and they also need to be specified for the purpose of stamp duty.

As the matter was urgent and the Karnataka Legislative Assembly was not in session, the Karnataka Stamp (Amendment) ordinance, 2016 (Karnataka ordinance 2 of 2016) was promulgated on 22.06.2016.

This bill seeks to replace the said ordinance.

Hence the Bill.

## EXPLANATORY STATEMENT AS REQUIRED BY SUB-RULE (1) OF RULE 80 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE ASSEMBLY

Mines and Mineral (Development and Regulation) Act, 1957 (Central Act 67 of 1957) Act defines a "mining lease" as a lease granted for the purpose of undertaking mining operations, and further defines "mining operations" as any operations undertaken for the purpose of winning any mineral. Mining lease is essentially an instrument designed for regulation of mining operations and mining rights. It does not fully conform to all the characteristics of a lease of immovable property. The Possibility of privately owned and being part of the mining lease area is also very clearly contemplated under the Mines and Mineral (Development and Regulation) Act, 1957 as well as the Karnataka Minor Minerals Concession Rules, 1994. Therefore, there is a need to classify mining leases as a separate class of documents for the purpose of stamp duty, distinct from lease of immovable property. Separate provisions are also provided for lease granted by auction and granted by way other than auction.

Hon'ble Supreme Court in its order dated: 30.07.2015 has directed the State Government to conduct the auction of 15 'C' Category mines within outer limit of 32 weeks, preferably 26 weeks from the date of order in accordance with the amendments of Mines and Minerals (Development and Regulation) Act, 1957 and the Mineral (Auction) Rules, 2015 along with additional conditions.

The time line fixed by the Hon'ble Supreme Court has already expired in March, 2016 and in this connection an Interlocutory Application has been filed before the Hon'ble Supreme Court for extending time for auction of mines. The Hon'ble Supreme Court has not yet decided on Interlocutory Application filed by the Commerce and Industries Department. The Commissioner, Department of Mines and Geology has already extended the calendar of events four times. Making this legislation is very essential for the Commissioner, Department of Mines and Geology to give clarification to the bidders with respect to stamp duty and registration fee on the Mining Lease Development and Production Agreement (MDPA) and mining Lease Deed. The last date for giving clarification to the bidders is 22.06.2016. proposed legislation needs to be passed before this date. If the matter is further delayed then the Hon'ble Supreme Court may take it seriously and it will create a very difficult position for the State Government to explain the delay in the matter.

A new instrument called the Mine Development and Production Agreement has been introduced by the Minerals (Auction) Rules, 2015 and the Minerals (Other than Atomic and Hydrocarbons Energy) Minerals Rule 2016, and they also need to be specified for the purpose of stamp duty.

As the matter was urgent and the Karnataka Legislative Assembly was not in session, the Karnataka Stamp (Amendment) ordinance, 2016 (Karnataka ordinance 2 of 2016) was promulgated on 22.06.2016.

**FINANCIAL MEMORANDUM**

There is no extra expenditure involved in the proposed legislative measure.

**KAGODU THIMMAPPA**
MINISTER FOR REVENUE

**S.Murthy**
Secretary (I/C)
Karnataka Legislative Assembly

Government Press, Vikasa Soudha Unit, Bengaluru 8th July 2016 P7, W.D.336, Copies 750